ಕಿಟಕಿಯಿಂದ ಮೆಲ್ಲಗೆ ಒಂದು ಇಣುಕು ಹಾಕಿದ. ಕಿಟಕಿಯ ಸಣ್ಣ ಕಿಂಡಿಯೊಳಗಿನಿಂದ ಬಿಳಿ ದಾರದಂತೆ ಬೆಳಕು ಹರಿದು ಹೋಗುತ್ತಿದ್ದುದನ್ನು ಕಂಡ.

ಆಚಾರರ ಮಗನಿಗೆ ಮದುವೆಯಾಗಿ ತಿಂಗಳಾಗಿತ್ತು. ಆ ಜೋಡಿ ಒಬ್ಬರಿಗೊಬ್ಬರು ತಬ್ಬಿ ಹೊರಳಾಡುತ್ತಿರುವುದನ್ನು ಕಂಡು ಹೆದರಿ ನಿಂತ ಚಿಕ್ಕನ ಕಣ್ಣೊಳಗೆಲ್ಲ ಆ ದೃಶ್ಯ ಹರಡಿ ನಿಂತಿತು. ಸರ್ಕಸ್ಸಿನವರು ಗುಂಡು ಎತ್ತುವ ಸಾಹಸದಂತೆ ದೊಂಬರು ಕಂಬಿಯ ಮೇಲೆ ನಡೆಯುತ್ತಿರುವಂತೆ, ಸೋಮ ಮಣೇವು ಹಾಕುತ್ತಿರುವಂತೆ ಕಂಡ ದೃಶ್ಯದ ಮೇಲೆ ಕಲ್ಲೊಂದನ್ನು ಎಸೆದು ಬೆಚ್ಚಿದ. ಕಲ್ಲು ನೇರ ಮಲಗಿದ್ದವರ ಮೇಲೆ ಬಿತ್ತು. ತಮ್ಮ ಏಕಾಂತಕ್ಕೆ ಬಿದ್ದ ಕಲ್ಲನ್ನು ಕಂಡು ಯಾರೋ ಏನೋ ಎಂದು ಗಾಬರಿಗೊಂಡ ಅವರು ದಡಬಡಾಯಿಸಿ, ಮುಚ್ಚು ಮರೆಗೆಂದು ಇದ್ದಬದ್ದ ಬಟ್ಟೆಗಳನ್ನು ಮೈಮೇಲೆ ಎಳೆದುಕೊಂಡರು.

ಸಾವರಿಸಿ ಮೇಲೆದ್ದ ಗೌರಮ್ಮ 'ಅದ್ಯಾರ್ಲಾ? ಅದ್ಯಾರು?' ಎಂದು ದನಿ ಎತ್ತರಿಸಿದಳು. ಅಲ್ಲಿಂದ ಓಟ ಕಿತ್ತ ಚಿಕ್ಕ ಮಿಂಚಿನಂತೆ ಮಲ್ಲನ ಹೊಲ ಸೇರಿ ಕಣ್ಮರೆಯಾದ. ಅದೇ ಸಮಯದಲ್ಲಿ, ಅದೇ ದಾರಿಯಲ್ಲಿ ಇದನ್ನೇನೂ ಅರಿಯದ ಲೋಕ ತನ್ನ ಪಾಡಿಗೆ ತಾನು ಹೋಗುತ್ತಿದ್ದ. 'ಇವನೇ ಇಂಥಾ ಕೆಲಸ ಮಾಡಿರೋನು' ಎಂದು ಕಲ್ಪಿಸಿಕೊಂಡ ಆಚಾರರ ಸೊಸೆ ಗೌರಮ್ಮ 'ಅಲ್ಲ ಈ ಊರ್ನೋವ್ಳೆ ಅದೇನ್ ಮಾನ ಮರ್ಯಾದಿ ಅನ್ನೋದು ಇದಿಯೋ ಇಲ್ವೋ, ಗಂಡ ಹೆಂಡ್ತಿ ಮಲಗಿದ್ರೆ ಕದ್ದು ಮುಚ್ಚಿ ನೋಡದೇನು? ನಾವೇನು ಸ್ಪೆಷಲ್ಲಾಗಿ ಮಾಡ್ಕತಿವ, ಎಂಥ ನಾಚಿಕೆಕೆಟ್ಟವು ಇದ್ದಾವೋ ನಾ ಕಾಣೆ' ಅನ್ನುತ್ತಾ ಲೋಕನ ಕಡೆಗೆ ಕೈ ತೋರಿ ಹೇಳದಿದ್ದರೂ, ಅವಳ ನೋಟ ಇವನೇ ಎನ್ನುವಂತಿದ್ದುದರಿಂದ ಲೋಕನಿಗೆ ಒಂಥರಾ ಹರಾಸಾದಂತಾಗಿ ಇದಕ್ಕೆ ತಲೆ ಕೆಟ್ಟೋಯಿತೇನೋ, 'ಇದೇನಮ್ಮ ಯಾರಿಗೆ ಬೈಯ್ತಿದ್ದೀಯ?' ಎಂದು ಕೇಳಿದ. ಅದಕ್ಕವಳು ನೀನೇ ಎಂಬ ಭಾವ ಮೋರೆಯ ಮೇಲೆ ಮೂಡಿಸಿ ತೀಕ್ಷ್ಣ ದೃಷ್ಟಿಯಿಂದ, 'ಇನ್ಯಾರಿಗೆ, ಮನೆ ಮನೆ ಕದ್ದು ಬಗ್ಗಿ ಇಣುಕ್ತವಲ್ಲ ಅವಕ್ಕೆ. ನಿನಗೇನಾಯ್ತು? ನೀನು ಮಾಡಿಲ್ಲ ಅಂದ್ರೆ ಬದ್ರಾಗಿ ಚಡ್ಡಿ ಮುಚ್ಕಂಡು ಹೋಗು' ಎಂದಳು.

ಲೋಕನಿಗೆ ಮರ್ಮಾಂಗಕ್ಕೇ ಕೈ ಹಾಕಿದಂತಾಗಿ 'ಏನಮ್ಮ ನೀನನ್ನದು? ನಾನೇನು ನಿನ್ನ ಮುಂದೆ ಚಡ್ಡಿ ಬಿಚ್ಕಂಡು ಹೆಗಲಿಗೆ ಹಾಕ್ಕಂಡು ಹೋಗ್ತಿದ್ದೀನಾ?' ಅಂದುಕೊಂಡು ಮುಂದೆ ಹೋಗುತ್ತಾ, 'ಇವಳ್ದೊಳ್ಳೇ ಕಥೆ ಆಯ್ತಲ್ಲಾ' ಎಂದು ಗೊಣಗಿದ. ಆ ಮಾತು ಆಚಾರರ ಮಗ ಮೂರ್ತಿಗೆ ಕೇಳಿ 'ಏ ಯಾವನ್ಲಾ ಅದು?' ಎಂದು ದನಿ ಏರಿಸಿ ಗದರಿದ. ಆಚಾರರ ಸೊಸೆ 'ಬಿಚ್ಕಂಡು ಕುಣೀಲ, ಯಾರಾರ ನಿಂದ ನೋಡೋವ್ರಿದ್ರೆ' ಎನ್ನುತ್ತಿದ್ದಂತೆ, 'ಹಲ್ಕ ಮುಂಡೆ, ಇವಳೇನು ಈ ಊರಾಗೆ ಪೂರ್ವೆಸಂಗೆ ಕಾಣಲ್ಲ' ಎಂದು ಅಂದುಕೊಳ್ಳುತ್ತಾ ಅತ್ತ ಹೊರಟ.

* * *

ಹಾಸಿಗೆಯಲ್ಲೇ ಹೊರಳಾಡುತ್ತಿದ್ದ ಆಚಾರ್ರ ಮಗ ತಮ್ಮಯ್ಯನಿಗೆ ನಿದ್ರೆ ಹತ್ತಿತ್ತು. ಬನೀನು, ಪಟಾಪಟೆ ನಿಕ್ಕರಿನಲ್ಲಿ ಕಾಣಿಸಿಕೊಂಡ ಮಲ್ಲನು ಆಚಾರರ ಮನೆಯ ಜಗುಲಿಗೆ ಬಂದು ಗಾಳಿ ಬೀಸುವ ದಿಕ್ಕಿಗೆ ಮುಖ ಮಾಡಿ ಕುಳಿತ. ಬೆವರಿದ ಅವನ ತೊಡೆ ಸಂದುಗಳು ಗಾಳಿಗೆ ವಿಸ್ತಾರಗೊಂಡು ತನ್ನ ದೇಹದ ಮೇಲೆ ಪ್ರಜ್ಞೆಯಿಲ್ಲದವನಂತೆ ಕುಳಿತಿದ್ದರಿಂದ ವಿನೋದ ಟೂರಿಂಗ್ ಟಾಕೀಸ್‌ನ ಎ ಸರ್ಟಿಫಿಕೆಟ್ ಪಿಚ್ಚರ್‌ನಲ್ಲಿ ಕಂಡಂತೆ ಒಳ ಅಂಗಗಳು ದಾರಿಹೋಕರಿಗೆ ಕಾಣುತ್ತಿದ್ದವು. ಜನ ಇತ್ತ ಒಮ್ಮೆ ನೋಡಿದರಾದರೆ, ಮತ್ತೆ ಇತ್ತ ಮುಖಮಾಡದೆ ಸಂಕೋಚಗೊಂಡು ಅನಾಯಾಸವಾಗಿ ನೋಡಸಿಕ್ಕ ಈ ಮೋಜಿಗೆ ಮುಸಮುಸ ನಗುತ್ತಾ ಹೋಗುತ್ತಿದ್ದರು.

ತಮ್ಮಯ್ಯನ ಹೆಂಡತಿ ಮಲ್ಲನೊಂದಿಗೆ ಹರಟೆ ಹೊಡೆಯುತ್ತ ಪಾತ್ರೆ ತೊಳೆಯುತ್ತಿದ್ದಳು. ಅವನ ಮಾತಿಗೆ ಆಗಾಗ ನಗುತ್ತಲೂ ಇದ್ದಳು. ತಮ್ಮಯ್ಯನಿಗೆ ಹೊಟ್ಟೆಯೊಳಗಿನ ಪಿತ್ತ ತಲೆಗೇರಿ ಇಂಥ ಮೈಲಿಗೆ ಕತೆಗಳಿಗೆ ಊರಲ್ಲಿ ರೆಕ್ಕೆ, ಪುಕ್ಕ ಮೂಡುತ್ತವೆ ಎಂದುಕೊಂಡು, ಈ 'ಬೋಸುಡಿ ಮಗ ಮಲ್ಲ ಜಗಲಿ ಇದ್ರಲ್ವೆ ಬರೋದು' ಎಂದು ಜಗಲಿಯನ್ನೇ ಒಡೆಸಿ ಹಾಕುತ್ತಿರುವಂತೆ ನಿದ್ರೆಯಲ್ಲಿ ಮನಸ್ಸು ಅರೆಸ್ವಪ್ನ ಅನುಭವಿಸುತ್ತಿತ್ತು. ಜಗಲಿಯನ್ನು ಒಡೆಯುತ್ತಿರುವಾಗ ಜಗಲಿಯ ಒಂದು ಕಲ್ಲಿಗೆ ಹಾರೆಯ ಏಟು ಬಿದ್ದು, ಆ ಕಲ್ಲು ಹಾರೆಯನ್ನೇ ಎತ್ತಿ ಹೊರಗೆ ಉಗುಳಿದಾಗ ಆ ಹಾರೆ ಬಂದು ತಮ್ಮಯ್ಯನ ಕಾಲಿಗೆ ತಾಗಿ ಹೊಟ್ಟೆಯಲ್ಲಿ ಕೆಂಡ ಒಂದಲ್ಲಾ ಎರಡಲ್ಲ... ಹತ್ತು ಹಲವು. ಪುಟ್ಟಮ್ಮಜ್ಜಿ 'ಅಯ್ಯೋ' ಎನ್ನುತ್ತಾ ಜಗಲಿಯಪ್ಪೋ ಎಂದು ಆಕ್ರಂದಿಸಿ ಜಗಲಿಯ ನಾಕಾಮೂಲೆಯ ಮುಟ್ಟಿ 'ಅಯ್ಯಯ್ಯೋ ಯಾರಾರ ಬರ್ರಪ್ಪಾ' ಎಂದು ಅರಚಿದಳು. ಮನೆಯಾಚೆ ಗಾಳಿ ಸುಯ್ದಾಡುತ್ತಿತ್ತು. ಮರದ ಕೊಂಬೆ, ರೆಂಬೆ ತೊಯ್ದಾಡುತ್ತಿದ್ದವು. ಎಷ್ಟು ಕಡಿದರೂ ಮತ್ತೆ ಚಿಗುರಿ ಲಂಬಿಸಿ ಬೆಳೆದು ಬಂದ ಜಾತಿಯೆಂಬ ಮರ, ಮಠಮಾನ್ಯ, ರಾಜಕೀಯ ನೀತಿಯ ನಿಲುವುಗಳು ಒಡಲಿನಿಂದ ಜೀವ ರಸವನ್ನೂಡಿ ಈ ಮರ ತಲೆ ಎತ್ತಿ ನಿಂತಿದೆ ಎಂದು ಯಾರೋ ಗಡಸು ದನಿಯಲ್ಲಿ ಕೂಗಿದಂತಾಗಿ ಹೊರಗಿನ ಗಾಳಿಯು ಜೋರಾಗಿ ಬೀಸಿದಂತಾಯಿತು. ರಕ್ತ ರೊಚ್ಚಿನಿಂದ ಕುದಿಯುತ್ತಿತ್ತು. ತಮ್ಮಯ್ಯನ ಕಣ್ಣಾಲಿಗಳಲ್ಲಿ ಬುಗಬುಗನೆ ಎದ್ದ ಬೆಂಕಿಗೆ ಅಲ್ಲಿ ಮಲಗಿದ್ದ ತ್ಯಾಗ ಬೆಚ್ಚಿ ಎದ್ದು ಕೂತ.

ಯಾರದೋ ಅರ್ಥವಾಗದ ದನಿ ಕೇಳಿ ಎದ್ದಾಗ ಪಕ್ಕದಲ್ಲೇ ಕುಳಿತ ಪುಟ್ಟಮ್ಮಜ್ಜಿ ತ್ಯಾಗನ ಭುಜ ಹಿಡಿದು ಅಲುಗಿಸಿ 'ಲೇ ಪಾಪ, ಯಾಕೋ ಕನಸು ಗಿನಸು ಬಿತ್ತೇನೋ' ಅನ್ನುತ್ತ ಗಲ್ಲ ಮುಟ್ಟಿದಳು. ತಟ್ಟನೆ ತ್ಯಾಗನಿಗೆ ಎಚ್ಚರವಾಯಿತು. ಕುಲುಮೆಯೊಳಗೆ ಇನ್ನೂ ಕೆಲಸ ನಡೆಯುತ್ತಲೇ ಇತ್ತು. ತಿದಿ ಆಡಿಸಿದಂತೆಲ್ಲ ಕಿಡಿ ಮೇಲೆದ್ದು ಹಾರುತ್ತಿದ್ದವು. ಕುಲುಮೆಯಿಂದ ಆಚೆ ಬಂದ ತ್ಯಾಗನಿಗೆ ಆ ರಸ್ತೆಯ ಅಂಚಿನಲ್ಲಿದ್ದ ಗೋಣಿ ಮರದಲ್ಲಿ ಊರ ಹುಡುಗರು ಮರಕೋತಿ ಆಟ ಆಡುತ್ತಿದ್ದುದು ಕಾಣಿಸಿತು. ಅಲ್ಲಿಗೋಗನ ಅಂತ ಒಂದು ಸಾರಿ ಅವನಿಗನ್ನಿಸಿತಾದರೂ ಯಾಕೋ ಬೇಡವೆನಿಸಿ ಊರ ಮುಂದಿನ ಕಲ್ಯಾಣಿಯತ್ತ ಹೆಜ್ಜೆಯಾಕಿದ.

ಕಲ್ಯಾಣಿಯ ಎಡಭಾಗದಲ್ಲಿ ನಿಂತು ಬೀಡಿ ಹಚ್ಚಿ, ಪೂಜೆ ಪಾತ್ರೆ ತೊಳೆಯುತ್ತಿದ್ದ ಅಮ್ನೋರ ಜೊತೆ ಮಲ್ಲ ಮಾತಿಗಿಳಿದಿದ್ದ. ಹುಡುಗರು ದಡದ ಮೇಲಿಂದ ನೀರಿಗೆ ಹಾರಿ ನೆಗೆದು, ಈಜುತ್ತಾ, ಕುಣಿದು ಕುಪ್ಪಳಿಸುತ್ತಾ, ಕೇಕೆ ಹಾಕುತ್ತಾ ಆಡುತ್ತಿದ್ದ ನೀರಿನಾಟವ ನೋಡಿ 'ಅಯ್ಯೋ ಯಂಗೆ ಈಜೊಡಿಯುತ್ತೆ ನೋಡಿ ಅಮ್ನೋರೆ' ಎಂದು ಅಲ್ಲೇ ಈಜುತ್ತಿದ್ದ ಆ ನಾಯಕರ ಹುಡುಗರ ನೋಡಿ ಅಸೂಯೆಪಟ್ಟು, 'ನಮ್ಮಷ್ಟೆ ದಿನಕ್ಕೆ ನಾಲ್ಕು ಸಾರಿ ತಟ್ಟೆಗಾಕಿ ನೋಡಿ ಬೇಕಾರೆ ತಿಂತವೆ, ಇಂತಹ ಒಂದೀಜು ಈಜ್ತಾವಾ? ಇಂತವ್ಕೆ ಹೇಳೋರಿಲ್ಲ ಕೇಳೋರಿಲ್ಲ, ಎಲ್ಲಾ ಇದ್ದು ನಮ್ಮಂತೋರ್ಗೆ ಇಂಥವಾರ ಹುಟ್ಟಬಾರ್ದ' ಎಂದು ನಾಲ್ಕೆಜ್ಜೆ ಮುಂದೆ ಬಂದು ನಿಂತ.

ಅಮ್ನೋರು ಪಾತ್ರೆ ಉಜ್ಜಿ ತೊಳೆದು ಬುಟ್ಟಿಗೆ ಹಾಕುತ್ತಿದ್ದಾಗ ಆಯ ತಪ್ಪಿ ಕೈಯಿಂದ ರುದ್ರಾಣಿಯೊಂದು ನೀರಿಗೆ ಜಾರಿ ಅಲೆಯೊಂದಿಗೆ ಫಳಫಳ ಹೊಳೆಯುತ್ತ ಹಾವಿನಂತೆ ನೀರಿನಲ್ಲಿ ಮುಳುಗೇ ಹೋಯಿತು. 'ಅಯ್ಯಯ್ಯೋ ಹೋಯ್ತು' ಎಂದು ಅವರು ಕೂಗುವುದಕ್ಕೂ, ಅದ ಕೇಳಿದ ತ್ಯಾಗನು ಕಲ್ಯಾಣಿಯೊಳಗೆ ನೆಗೆಯುವುದಕ್ಕೂ ಒಂದೇ ಆಗಿತ್ತು. ನೀರಲ್ಲೇ ಆಡುತ್ತಿದ್ದ ಹುಡುಗರು ಇತ್ತ ಗಮನ ಕೊಡಲೇ ಇಲ್ಲ. ತ್ಯಾಗ ಮುಳುಗುತ್ತಾ, ಮುಳುಗುತ್ತಾ ಕೊಳದ ಆಳಕ್ಕೆ ಇಳಿಯತೊಡಗಿದ.

ಅವನು ಆಳಕ್ಕೆ ಆಳಕ್ಕೆ ಇಳಿಯುತ್ತಿದ್ದಂತೆ ಅಮ್ನೋರ ಎದೆಯಾಳದಲ್ಲಿ ಡವಡವ ಶುರುವಾಗಿತ್ತು. ಸೂರ್ಯ ನೆತ್ತಿಯಲ್ಲಿ ಸ್ತಬ್ಧವಾಗಿದ್ದರೂ ಅಲ್ಲೇ ನಿಂತು ಎಲ್ಲವನ್ನೂ ನೋಡುತ್ತಿದ್ದ ಮಲ್ಲನ ಕಣ್ಣ ಗೊಂಬೆಗಳು ಕೆಂಡದ ಉಂಡೆಗಳಾಗಿ ತಕತಕ ಕುಣಿಯುತ್ತಿದ್ದವು. ಎಷ್ಟೊತ್ತಾದರೂ ಮೇಲೇಳದ್ದನ್ನು ಕಂಡು ಸಂಕಲ್ಪ ಈಡೇರಿತೆಂದು ಕಲ್ಯಾಣಿಯ ನಾಕಾಮೂಲೆಗಳನ್ನು ಅವನ ಅನಾಗರಿಕ ಕಣ್ಣ ಗೊಂಬೆಗಳು ತಡಕಾಡಿದವು. ಅಮ್ನೋರೂ ಸಹ ಗಾಬರಿಯಿಂದ ನೀರನ್ನೇ ನೋಡುತ್ತ ಮೆಟ್ಟಿಲ ಮೇಲಕ್ಕೆದ್ದು ನಿಂತರು. ತ್ಯಾಗ ಬುಳುಕ್ಕನೆ ಮೇಲೆ ಬಂದದ್ದೇ ತಡ ಅಮ್ನೋರು ನಿಸೂರಾದರು.

'ಅಯ್ಯೋ ಮುಂಡೇದೆ, ಜೀವ ಹಾರೋದಂಗಾಯ್ತಲ್ಲೋ, ಇದು ಹೋದರೆ ಹೋಯ್ತು, ತುಂಬಾ ಆಳಕ್ಕೋಗಿದ್ದೇನೋ' ಎನ್ನುತ್ತಾ ತ್ಯಾಗನ ಏದುಸಿರು ಗಮನಿಸಿ 'ಸುಧಾರಿಸಿಕೊಳ್ಳೊ' ಎಂದರು. ಅವರ ಕೈಗೆ ತ್ಯಾಗ ರುದ್ರಾಣಿ ಕೊಟ್ಟ. ಅಮ್ಮಾವ್ರ ದೃಷ್ಟಿಯಲ್ಲಿ ಬೆರಗು ತುಂಬಿತ್ತು. ನೆನೆದ ಅವನು ಮೈಮೇಲಿನ ಅಂಗಿ ಚಡ್ಡಿಯನ್ನು ಬಿಚ್ಚಿ ಒಂದು ಸಾರಿ ಹಿಂಡಿ ಮೆಟ್ಟಿಲ ಮೇಲೆಸೆದ. ಅಲ್ಲೇ ಸಿಕ್ಕ ತುಂಡು ಬಟ್ಟೆಯಲ್ಲಿ ಪುಟಗೋಸಿ ಕಟ್ಟಿಕೊಂಡ.

ನೀರನ್ನು ಕಾಲಲ್ಲಿ ಜಾಡಿಸಿ ಬೆಂಡಿನಂತೆ ತೇಲತೊಡಗಿದ. ಅವನತ್ತಲೇ ನೋಡಿದ ಮಲ್ಲನು ಹಚ್ಚಿದ ಬೀಡಿಯ ನೆಲಕ್ಕೆ ಸಿಟ್ಟಲ್ಲಿ ವಗೆದು ಮೆಟ್ಟಲ್ಲಿ ಹೊಸಕಿ ಹಾಕಿದ. ತ್ಯಾಗನು ತೇಲುತ್ತಾ ಸಾಗಿ ಮತ್ತೊಮ್ಮೆ ಮುಳುಗಿದ. ಅವನು ಅತ್ತ